2008–09ನೇ ಸಾಲಿನಲ್ಲಿ ತೆರೆದಿರುವ ಹೊಸ ಶಾಲೆ	*ಕಟ್ಟಡ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿರುವ ಅನುದಾನ ವೆಚ್ಚ*
1. ಸ.ಕಿ.ಪ್ರಾ.ಶಾಲೆ, ಗೃಹಲಕ್ಷ್ಮೀಲೇಔಟ್	ರೂ. 9.00 ಲಕ್ಷಗಳು

ಆ) ಈ ಶಾಲೆಗಳ ಪೈಕಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ನಾಗಸಂದ್ರ ಶಾಲೆಗೆ ಎರಡು ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲಾಗಿದೆ. ಅದಕ್ಕೆ ತಗುಲಿದ ವೆಚ್ಚ ರೂ. 7.60 ಲಕ್ಷಗಳು.

ಪಿ.ಎಂ.ಜಿ.ಎಸ್. ಯೋಜನೆಯ ರಸ್ತೆ ಕಾಮಗಾರಿ

450 (683) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು):– ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಳೆದ ಎರಡು ವರ್ಷಗಳಲ್ಲಿ ಸಿಂಧನೂರು ತಾಲ್ಲೂಕಿಗೆ ಪಿಎಂಜಿಎಸ್ ಯೋಜನೆಯಡಿ ಮಂಜೂರಾಗಿರುವ ರಸ್ತೆಗಳ ಸಂಖ್ಯೆ ಎಷ್ಟು ಮತ್ತು ಯಾವುವು (ವಿವರ ನೀಡುವುದು) ;

ಆ) ಸಿಂಧನೂರು ತಾಲ್ಲೂಕಿಗೆ ಪಿಎಂಜಿಎಸ್ ಯೋಜನೆಯಡಿ ಮಂಜೂರಾದ ರಸ್ತೆಗಳಿಗೆ ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು ; (ರಸ್ತೆ ಮತ್ತು ವರ್ಷವಾರು ವಿವರ ನೀಡುವುದು)

ಇ) ಸಿಂಧನೂರು ತಾಲ್ಲೂಕಿಗೆ ಪಿಎಂಜಿಎಸ್ ಯೋಜನೆಯಡಿ ಮಂಜೂರಾಗಿರುವ ರಸ್ತೆಗಳ ಕಾಮಗಾರಿಯು ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದಲ್ಲಿ, ಈ ರಸ್ತೆಗಳ ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಉ) ಈ ರೀತಿ ಕಳಪೆ ಕಾಮಗಾರಿ ಮಾಡಿದ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದೇ ;

ಊ) ಹಾಗಿದ್ದಲ್ಲಿ ಎಂದು ಸೇರಿಸಲಾಗುವುದು ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು):–

ಅ) ಕಳೆದ ಎರಡು ವರ್ಷಗಳಲ್ಲಿ ಸಿಂಧನೂರು ತಾಲ್ಲೂಕಿಗೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ 9 ರಸ್ತೆ ಕಾಮಗಾರಿಗಳು ಮಂಜೂರಾಗಿರುತ್ತವೆ. ಅವುಗಳ

ವಿವರವನ್ನು ಅನುಬಂಧದಲ್ಲಿ ನೀಡಿದೆ.

ಆ) ಸಿಂಧನೂರು ತಾಲ್ಲೂಕಿಗೆ ಪಿಎಂಜಿಎಸ್ ಯೋಜನೆಯಡಿ ಕಳೆದ 2 ವರ್ಷಗಳಲ್ಲಿ ಮಂಜೂರಾದ ರಸ್ತೆ ಕಾಮಗಾರಿಗಳ ಅಂದಾಜು ಮೊತ್ತದ ವಿವರ ಕೆಳಕಂಡಂತಿದೆ.

ಕ್ರ.ಸಂ.	ವರ್ಷ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1.	2008–09	608.70
2.	2009–10	871.85

ವರ್ಷವಾರು ಮತ್ತು ರಸ್ತೆವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ.

ಇ) ಬಂದಿದೆ.

ಈ) ಸಿಂಧನೂರು ತಾಲ್ಲೂಕಿನ 4 ಕಾಮಗಾರಿಗಳ ಗುಣಮಟ್ಟದಲ್ಲಿ ರಾಷ್ಟ್ರೀಯ ಗುಣ ನಿಯಂತ್ರಣ ಮಾನಿಟರ್ ಹಾಗೂ ರಾಜ್ಯ ಗುಣ ನಿಯಂತ್ರಣ ಮಾನಿಟರ್ ರವರ ಪರಿವೀಕ್ಷಣೆಯಲ್ಲಿ ಗುರುತಿಸಿದ ಲೋಪಗಳನ್ನು ಸದರಿ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರಿಂದಲೇ ಸರಿಪಡಿಸಿರುವುದರಿಂದ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಅನುಬಂಧ

ಕಳೆದ 2 ವರ್ಷಗಳಲ್ಲಿ ಸಿಂಧನೂರು ತಾಲ್ಲೂಕಿಗೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಮಂಜೂರಾದ ರಸ್ತೆಗಳ ಅನುದಾನದ ವಿವರ

ಕ್ರಮ ಸಂಖ್ಯೆ	ರಸ್ತೆಗಳ ವಿವರ	ಉದ್ದ ಕಿ.ಮೀ.ಗಳಲ್ಲಿ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
	2008–09		
1	ಮಲ್ಕಾಪುರ ದಿಂದ ಟಿ–04 ವರೆಗೆ	3.10	106.00
2	ಪಗಡದಿನ್ನಿಯಿಂದ ಗೌಂಡಬಾವಿ ವರೆಗೆ	11.80	322.00
3	ಭೂದಿಹಾಳ್ ನಿಂದ ಟಿ–08 ವರೆಗೆ	2.72	79.00
4	ಹೊಸಹಳ್ಳಿ ಕೆ. ಯಿಂದ ಟಿ–09 ವರೆಗೆ	3.76	101.70
			608.70

	2009–10		
1.	ಚಿರತನಾಳ್‌ನಿಂದ ಟಿ–01 ವರೆಗೆ	2.18	89.53
2.	ಶ್ರೀನಿವಾಸ ಕ್ಯಾಪ್‌ನಿಂದ ಟಿ–08 ವರೆಗೆ	7.73	274.37
3.	ಹನುಮಾಪುರದಿಂದ ಎಲ್–045 ವರೆಗೆ	3.11	94.77
4.	ವೀರಾಪುರದಿಂದ ಟಿ–09 ವರೆಗೆ	8.71	241.70
5.	ಮೆಹರ್‌ನಾಳ್ ನಿಂದ ರಂಗಾಪುರ ವರೆಗೆ	5.69	171.48
			871.85

ಪ್ರಾಥಮಿಕ ಶಾಲೆಗಳಲ್ಲಿ 8ನೇ ತರಗತಿಗೆ ಅವಕಾಶ

452 (976) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಕೆಲವು ಪ್ರಾಥಮಿಕ ಶಾಲೆಗಳಲ್ಲಿ 8ನೇ ತರಗತಿ ಪ್ರಾರಂಭ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಈ ಶಾಲೆಗಳನ್ನು ಮೇಲ್ದರ್ಜೆಗೇರಿಸಲಾಗಿದೆಯೇ ?

ಇ) ಹಾಗಿದ್ದಲ್ಲಿ, ಮೇಲ್ದರ್ಜೆಗೇರಿಸಲು ಸರ್ಕಾರ ಅನುಸರಿಸಿದ ಮಾನದಂಡಗಳೇನು;

(ಉ) ಈ ರೀತಿ ಮೇಲ್ದರ್ಜೆಗೇರಿಸುವಲ್ಲಿ ಕೆಲವು ಕ್ಷೇತ್ರಗಳಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಊ) ಹಾಗಿದ್ದಲ್ಲಿ, ಈ ಅನ್ಯಾಯವನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಬಂದಿದೆ.

ಆ) ಹೌದು.

ಇ) 3 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ/ಸರ್ಕಾರಿ ಅನುದಾನಿತ ಪ್ರೌಢಶಾಲೆ ಇಲ್ಲದೆಡೆಯಲ್ಲಿ ಅಂತಹ ಹಿ.ಪ್ರಾ.ಶಾಲೆಯಲ್ಲಿ 8ನೇ ದರ್ಜೆಯನ್ನು ಸೇರ್ಪಡಿಸಿ ಉನ್ನತ ದರ್ಜೆಗೇರಿಸಲಾಗಿದೆ.

ಉ) ಇಲ್ಲ, ಸಮಾನತೆ ಹಾಗೂ ಸಾರ್ವತ್ರಿಕ ಅವಕಾಶ ಕಲ್ಪಿಸಲಾಗಿದೆ.